ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೫ Part – V	ಬೆಂಗಳೂರು, ಗುರುವಾರ, ೦೩, ಸೆಪ್ಟೆಂಬರ್, ೨೦೨೬ (ಭಾದ್ರಪದ ೧೨, ಶಕವರ್ಷ, ೧೯೪೮) BENGALURU, THURSDAY, 03 SEPTEMBER, 2026 (BHADRAPADA 12, SHAKAVARSHA, 1948)	ನಂ. ೮೧೮ No. 818

ಶಾಲಾ ಶಿಕ್ಷಣ ಇಲಾಖೆ

ಆಯ್ಕೆ ಪ್ರಾಧಿಕಾರಿ ಹಾಗೂ ವಿಭಾಗೀಯ ಸಹನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಕೆ.ಜಿ. ರಸ್ತೆ, ಬೆಂಗಳೂರು-01 ಇವರ ಕಾರ್ಯಾಲಯ.

ಸಂಖ್ಯೆ: DPI-CPIOJD1(HSTA)/2/2026-JDBD-E-2259147 **ದಿನಾಂಕ : 03/09/2026**

ಸೇರ್ಪಡೆ ಅಧಿಸೂಚನೆ

2026-27ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆಯ ಬೆಂಗಳೂರು ಉತ್ತರ ವಿಭಾಗದ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ (ಕಲ್ಯಾಣ ಕರ್ನಾಟಕ ಉಳಿಕೆ ವೃಂದದ ಶೇ.8 % ರಷ್ಟು ಹುದ್ದೆಗಳ) ಪ್ರೌಢ ಶಾಲಾ ಸಹ ಶಿಕ್ಷಕರು (ಕನ್ನಡ ಭಾಷೆ, ಆಂಗ್ಲ ಭಾಷೆ, ಕಲಾ (ಕನ್ನಡ/ಇಂಗ್ಲೀಷ್) ಜೀವ ವಿಜ್ಞಾನ (ಕನ್ನಡ /ಇಂಗ್ಲೀಷ್) ಹಾಗೂ ದೈಹಿಕ ಶಿಕ್ಷಣ ಗ್ರೇಡ್-I ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 11.08.2026 ರಂದು ನೇಮಕಾತಿ ಅಧಿಸೂಚನೆ ಹೊರಡಿಸಿದೆ. ಸದರಿ ಅಧಿಸೂಚನೆಗೆ ಈ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಿದ್ದು, ಅದರಂತೆ ಓದಿಕೊಳ್ಳತಕ್ಕದ್ದು.

ಅಧಿಸೂಚನೆಯಲ್ಲಿರುವುದು	ಸೇರ್ಪಡೆಯಂತೆ ಓದಿಕೊಳ್ಳತಕ್ಕದ್ದು
ಅಧಿಸೂಚನೆ ಪುಟ ಸಂಖ್ಯೆ:10ರ ಕಂಡಿಕೆ:12 ರ **ಮೀಸಲಾತಿ: ಉಪಕಂಡಿಕೆ (A)ರಲ್ಲಿ ಜಾತಿ ಮೀಸಲಾತಿ ಪ್ರಮಾಣ ಪತ್ರಗಳು** ಸಲ್ಲಿಸುವ ಸಂಬಂಧ ಮಾಹಿತಿ ನೀಡಿರುವ ಕೋಷ್ಟಕದ **ಕ್ರ.ಸಂ.03 ರಲ್ಲಿ** **" ಪ್ರವರ್ಗ –II(a), II(b), III(a), ಮತ್ತು III(b), ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ-ಎಫ್ ರಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಲು ತಿಳಿಸಲಾಗಿದೆ".**	ಸರ್ಕಾರದ ಆದೇಶ ಸಂಖ್ಯೆ: ಹಿಂವಕ 232 ಬಿಸಿಎ 2026 ಬೆಂಗಳೂರು ದಿ:01/09/2026 ರಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಉದ್ಯೋಗದ ಮೀಸಲಾತಿಗಾಗಿ ನೇರ ನೇಮಕಾತಿ ಸಂದರ್ಭದಲ್ಲಿ ವಿವಾಹಿತ ಮಹಿಳೆ /ಪುರುಷ ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವಿತರಿಸಲು ಆದೇಶಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು. **"ವಿವಾಹಿತ ಮಹಿಳಾ/ಪುರುಷ ಅರ್ಜಿದಾರಳ/ನ ಉತ್ಪನ್ನಕ್ಕೆ ಅವಳ/ಅವನ ತಂದೆ ತಾಯಿಗಳ ಉತ್ಪನ್ನ ಸೇರಿಸಬಾರದು. ಅಂಥ ಪ್ರಕರಣಗಳಲ್ಲಿ ಪತಿ ಪತ್ನಿಯರು ಒಂದು ಸ್ವಾಯತ್ತ ಕುಟುಂಬದಂತೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಲ್ಲಿ ಅರ್ಜಿದಾರಳ/ನ ಉತ್ಪನ್ನಕ್ಕೆ ಅವಳ/ಅವನ ಪತಿ/ಪತ್ನಿಯ ಉತ್ಪನ್ನವನ್ನು ಸೇರಿಸಬೇಕು. ಅವರು ಅವಿಭಕ್ತ ಕುಟುಂಬದ ಅಂಗವಾಗಿ ವಾಸಿಸುತ್ತಿದ್ದರೆ, ಅರ್ಜಿದಾರಳ /ನ ಉತ್ಪನ್ನ ಮತ್ತು ಅವಿಭಕ್ತ ಕುಟುಂಬದ ಉತ್ಪನ್ನವನ್ನು ಒಟ್ಟಿಗೆ ಸೇರಿಸಿ ಕುಟುಂಬದ ಉತ್ಪನ್ನವನ್ನು ಕಂಡುಹಿಡಿಯಬೇಕು."** **ಅದರಂತೆ,** ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ –II(a), II(b), III(a), ಮತ್ತು III(b), ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ/ಪುರುಷ ಅಭ್ಯರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು **ನಮೂನೆ-ಎಫ್** ರಲ್ಲಿ ಪಡೆದು ಸದರಿ ನೇಮಕಾತಿಯ ಅರ್ಜಿಯೊಂದಿಗೆ ಲಗತ್ತಿಸಿ, ಸಲ್ಲಿಸುವುದು. ಅದರಂತೆ ಓದಿಕೊಳ್ಳತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

	ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ –II(a), II(b), III(a), ಮತ್ತು III(b), ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ/ಪುರುಷ ಅಭ್ಯರ್ಥಿಗಳು ಈ ಮೇಲಿನ ಸರ್ಕಾರಿ ಆದೇಶದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸದೇ ಆನ್‌ಲೈನ್ ಅರ್ಜಿಯನ್ನು, Submit ಮಾಡಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನಿಯಮದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಸದಾಗಿ Upload ಮಾಡಲು Online ಅರ್ಜಿಯಲ್ಲಿ **Edit ಗೆ ಅವಕಾಶ ನೀಡಿದೆ.** ಹಾಗೂ ಅರ್ಜಿ ಸಲ್ಲಿಸುವ **ಕೊನೆಯ ದಿನಾಂಕವನ್ನು ಸಹ ದಿನಾಂಕ:25/09/2026 ಹಾಗೂ ಪಾವತಿಸಿದ ಶುಲ್ಕ ಇತ್ಯರ್ಥಪಡಿಸಿಕೊಳ್ಳಲು ಕೊನೆಯ ದಿನಾಂಕ:28/09/2026 ರವರೆಗೆ ವಿಸ್ತರಿಸಿದೆ.** ಅಭ್ಯರ್ಥಿಗಳು **Edit option** ಅನ್ನು ಬಳಸಿಕೊಂಡು ನಿಯಮದಂತೆ ತಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವನ್ನು ಲಗತ್ತಿಸಿ, ಅರ್ಜಿ ಸಲ್ಲಿಸುವುದು.
ಅಧಿಸೂಚನೆಯಲ್ಲಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:07/09/2026 ಹಾಗೂ ಶುಲ್ಕ ಪಾವತಿಸಿರುವ ಶುಲ್ಕವನ್ನು ಖಚಿತಪಡಿಸಿಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕ:10/09/2026 ಆಗಿರುತ್ತದೆ.	ಅಭ್ಯರ್ಥಿಗಳು ಶುಲ್ಕ ಪಾವತಿಸಿ **ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:25/09/2026 ಹಾಗೂ ಪಾವತಿಸಿದ ಶುಲ್ಕವನ್ನು ಇತ್ಯರ್ಥಪಡಿಸಿಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕ:28/09/2026** ಎಂದು ಓದಿಕೊಳ್ಳತಕ್ಕದ್ದು. ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಿದಂತೆ ಅಭ್ಯರ್ಥಿಗಳು ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಅರ್ಜಿಯೊಂದಿಗೆ Upload ಮಾಡಿರಬೇಕು.
ನೇಮಕಾತಿ ಅಧಿಸೂಚನೆ ಪುಟ ಸಂಖ್ಯೆ:02 ಮತ್ತು 19ರಲ್ಲಿ ಇಲಾಖಾ ವೆಬ್‌ಸೈಟ್ ವಿಳಾಸ:**https://schooleducation.karnic.in** ಎಂದು ಮುದ್ರಿತವಾಗಿರುತ್ತದೆ.	ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ ವಿಳಾಸ **https://schooleducation.karnataka.gov.in** ಎಂದು ಓದಿಕೊಳ್ಳತಕ್ಕದ್ದು.
ಅಧಿಸೂಚನೆಯಲ್ಲಿ, ಪ್ರೌಢ ಶಾಲಾ ಕಲಾ ಶಿಕ್ಷಕ-(ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ಹುದ್ದೆಗಳನ್ನು PH-Low Vision ಅಭ್ಯರ್ಥಿಗಳಿಗೆ ಮಾತ್ರ ಮೀಸಲಿರಿಸಿ, ಅಧಿಸೂಚಿಸಲಾಗಿದೆ	ಅಧಿಸೂಚನೆಯಲ್ಲಿ, ಕಲಾ ಶಿಕ್ಷಕರು-(ಕನ್ನಡ ಮಾಧ್ಯಮ/ಆಂಗ್ಲ ಮಾಧ್ಯಮ) ವಿಷಯಗಳ ಹುದ್ದೆಗಳನ್ನು **PH- Low Vision** ಅಭ್ಯರ್ಥಿಗಳಿಗೆ ಮಾತ್ರ ಮೀಸಲಿರಿಸುವುದನ್ನು ಮಾರ್ಪಡಿಸಿ, **PH-Blindness and Low Vision** ಎಂದು ಸೇರ್ಪಡೆಗೊಳಿಸಿದ್ದು, ಅದರಂತೆ ಓದಿಕೊಳ್ಳತಕ್ಕದ್ದು.

ಸಹಿ/-
ಆಯ್ಕೆ ಪ್ರಾಧಿಕಾರಿ ಹಾಗೂ ವಿಭಾಗೀಯ ಸಹನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ವಿಭಾಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU Digitally signed by P S BASAVARAJU Date: 2026.09.03 23:57:45 +05'30'